# ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
## ಸಾರ್ವಜನಿಕ ಪ್ರಕಟಣೆ

ಅಯುಕ್ತರ ಕಛೇರಿ ಸಂಖ್ಯೆ ಪಿ.ಎಸ್.ಅರ್ (ಜಿ)/9083/12-13 ದಿನಾಂಕ:- 30/1/2013

ಬೆಂಗಳೂರಿನ ಕೇಂದ್ರ ಭಾಗದಲ್ಲಿರುವ ರಾಜಾಜಿನಗರ ಮತ್ತು ಮಲ್ಲೇಶ್ವರಂ ಬಡಾವಣೆಗಳು ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮತ್ತು ಬೆಂಗಳೂರು ನಗರ ರೈಲ್ವೆ ನಿಲ್ದಾಣಗಳಿಗೆ ಅತ್ಯಂತ ಸಮೀಪದಲ್ಲಿರುವುದರಿಂದ ಹಾಗೂ ಬೆಂಗಳೂರಿಗೆ ಬರುವ ಮತ್ತು ಹೊರಗೆ ಹೋಗುವ ಬಹುತೇಕ ವಾಹನಗಳು ಈ ಎರಡು ಬಡಾವಣೆಗಳ ಮೂಲಕ ಹಾದು ಹೋಗಬೇಕಾಗಿದೆ. ಇದರಿಂದಾಗಿ ರಾಜಾಜಿನಗರದಲ್ಲಿ ಹಾಗು ಮಲ್ಲೇಶ್ವರಂನಲ್ಲಿ ವಾಹನ ದಟ್ಟಣೆ ದಿನದಿಂದ ದಿನಕ್ಕೆ ವಿಪರೀತ ಹೆಚ್ಚುತ್ತಿದೆ. ಮುಖ್ಯವಾಗಿ ರಾಜಾಜಿನಗರ ಗ್ರೇಡ್ ಸಪರೇಟರ್ ನಿಂದ ಹಾಗು ದೀನಸೇವಾ ಸಂಘ ರಸ್ತೆ (ಪ್ಲಾಟ್ ಫಾರಂ ರಸ್ತೆ)ಯಿಂದ ಬರುವ ವಾಹನಗಳು ಓಕಳಿಪುರಂ ಕೂಡು ಸ್ಥಳದಲ್ಲಿ ಅಪಾರ ಒತ್ತಡಕ್ಕೆ ಸಿಲುಕಬೇಕಾಗುತ್ತದೆ. ಈ ಕೂಡು ಸ್ಥಳವು ನಗರದ ಹೃದಯ ಭಾಗಕ್ಕೆ ಬರಲು ಪಶ್ಚಿಮ ಭಾಗದಲ್ಲಿ ಹೆಬ್ಬಾಗಿಲಿನಂತಿರುತ್ತದೆ. ಈ ಕೂಡು ಸ್ಥಳದಲ್ಲಿ ವಾಹನ ದಟ್ಟಣೆ ಅತ್ಯಧಿಕವಾಗಿರುತ್ತದೆ ಬದಲೀ ರಸ್ತೆಗಳ ಕೊರತೆಯಿಂದಾಗಿ ಹಾಗು ಪ್ರಸ್ತುತ ಇರುವ ರಸ್ತೆಗಳ ಸಾಮರ್ಥ್ಯ ಈಗಿರುವ ವಾಹನ ದಟ್ಟಣೆಯನ್ನು ತಡೆಗಟ್ಟಲು ಸಾದ್ಯವಿಲ್ಲದೇವಿರುವುದರಿಂದ ಈ ಕೂಡು ಸ್ಥಳದ ಅಭಿವೃದ್ಧಿಯನ್ನು ಕೈಗೊಳ್ಳಲೇಬೇಕಾದ ಪರಿಸ್ಥಿತಿಯಿರುತ್ತದೆ

ಈ ಹಿನ್ನಲೆಯಲ್ಲಿ ಪಾಲಿಕೆಯಿಂದ ವಾಹನ ಸಂಚಾರ ಸುಗಮವಾಗಿಸಲು ಓಕಳಿಪುರಂ ಜಂಕ್ಷನ್ ನಿಂಧ ಫೌಂಟೇನ್ ವೃತ್ತದವರೆಗೆ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಪ್ರಸ್ತಾಪಿಸಲಾಗಿದ್ದು ಸದರಿ ಕಾಮಗಾರಿಗೆ ಘನ ಸರ್ಕಾರದವರು ಅಡಳಿತಾತ್ಮಕ ಅನುಮೋದನೆ ನೀಡಿದ್ದು ಸದರಿ ಯೋಜನೆಯಲ್ಲಿ ಹಾಲಿ ಇರುವ ನಾಲ್ಕು ಪಥದ ರಸ್ತೆಯನ್ನು ಎಂಟು ಪಥದ ರಸ್ತೆಗೆ ಅಗಲೀಕರಣ ಮಾಡಲು ಅನುವು ಮಾಡಿಕೊಂಡಿದ್ದು ಅದರಂತೆ ಹಾಲಿ ಪಾದಚಾರಿ ರಸ್ತೆ ಮೇಲೆ ಇರುವ 41 ಮರಗಳನ್ನು ತೆರವುಗೊಳಿಸಲು ಕರ್ನಾಟಕ ನಗರ ಮತ್ತು ಪಟ್ಟಣ ಯೋಜನೆಯ ಕಾಯ್ದೆ ಅಡಿಯಲ್ಲಿ ತೆಗೆದುಕೊಂಡಿರುವ ಕ್ರಮವನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

11.2.2013

ಅಯುಕ್ತರು
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
(S)